




ಅರಣ್ಯಗಳನ್ನು ಮತ್ತು ಅರಣ್ಯವಾಸಿ ಮೃಗಗಳನ್ನು ಕಾಪಾಡುವ ಕೆಲಸ ಬಹುಶಃ ನಮ್ಮಲ್ಲಿ ಬ್ರಿಟಿಷರು ಆರಂಭಿಸಿದರು. ಬಹಳ ಕಾಲ ಆ ವ್ಯವಸ್ಥೆ ಚೆನ್ನಾಗಿಯೇ ನಡೆಯಿತು. ಆದರೆ ಈಗ ಮಾನವ ಸಂತತಿ ತುಂಬಾ ಹಿಗ್ಗಿದೆ. ವನ್ಯಮೃಗಗಳ ಸಂತತಿಯೂ ಹಿಗ್ಗಿದೆ. ಈ ಕಾರಣದಿಂದ ಮನುಷ್ಯರ ಮತ್ತು ಮೃಗಗಳ ನಡುವೆ ಸಂಘರ್ಷ ನಡೆಯುತ್ತಿದೆ. ಈ ಸಂಘರ್ಷದಲ್ಲಿ ಮುಖ್ಯವಾಗಿ ಮನುಷ್ಯರಿಗೆ ಸವಾಲಾಗಿರುವುದು ಕೋತಿಗಳು, ಆನೆಗಳು,  ಹುಲಿಗಳು ಮತ್ತು ಕರಡಿಗಳು.

ಬಹಳ ಕಡೆ ಇವುಗಳಿಂದ ಮನುಷ್ಯರಿಗೆ ತಮ್ಮನ್ನು ಉಳಿಸಿಕೊಳ್ಳಲಾಗುತ್ತಿಲ್ಲ. ಇದಕ್ಕೆ ಅರಣ್ಯ ರಕ್ಷಕರಿಂದ ಪರಿಹಾರ ಸಿಗುತ್ತಿಲ್ಲ. ಅವರಿಂದ ಅದು ಸಾಧ್ಯವಾಗುವಂಥದೂ ಅಲ್ಲ. ಆದುದರಿಂದ ಮನುಷ್ಯರಿಗೆ ಮೃಗಗಳಿಂದ ರಕ್ಷಣೆ ನೀಡುವ ಒಂದು ಆಡಳಿತಾಂಗವನ್ನು ಸರಕಾರವೇ ತನ್ನ ಆಡಳಿತ ವ್ಯವಸ್ಥೆಯಲ್ಲಿ ಸೃಷ್ಟಿಸಬೇಕು. ಹಾಗೆ ಮಾಡದಿದ್ದರೆ ಹೆಚ್ಚು ಹೆಚ್ಚು ಜನರು, ಮುಖ್ಯವಾಗಿ ರೈತಾಪಿ ಜನರು, ಜೀವ ಕಳೆದುಕೊಳ್ಳುತ್ತಲೇ ಇರಬೇಕಾಗುತ್ತದೆ.

ವಿದೇಶಕ್ಕೆ (ಮುಖ್ಯವಾಗಿ ಕೊಲ್ಲಿ ರಾಷ್ಟ್ರಗಳಿಗೆ) ಹೋಗಿ ಒಳ್ಳೆಯ ಉದ್ಯೋಗ ಪಡೆದು 8—10 ವರ್ಷಗಳ ಕಾಲ ರಾತ್ರಿ ಹಗಲು ದುಡಿದು ಇಲ್ಲಿ ಬದುಕು ಸ್ವಾರಸ್ಯಹೀನ, ಸ್ವಾರಸ್ಯ ಹಣದಲ್ಲಿ ಮಾತ್ರ ಎಂದನಿಸಿದಾಗ ಸ್ವದೇಶಕ್ಕೆ ಮರಳಿದವರಿದ್ದಾರೆ. ಸಾಮಾನ್ಯವಾಗಿ, 40– –50 ವರ್ಷ ಪ್ರಾಯದ ಗಂಡಸರು ಹಾಗೆ ಮರಳಿ ಇಲ್ಲಿ ನಾಲ್ಕೈದು ಎಕರೆ ಭೂಮಿ ಖರೀದಿಸಿ ಕೃಷಿಯಲ್ಲಿ ತೊಡಗಿದವರಿದ್ದಾರೆ. ತೆಂಗು, ಅಡಿಕೆ, ಬಾಳೆಯ ತೋಟ ಮಾಡಿ ಕೌಟುಂಬಿಕ ಜೀವನದ ಆನಂದವನ್ನೂ, ಎಲ್ಲರೂ ಸೇರಿ ಮಾಡುವ ಕಾಯಕದಲ್ಲಿ ತೃಪ್ತಿಯನ್ನೂ ಕಾಣುವರಿದ್ದಾರೆ.

ಹೀಗೆ ಸ್ವದೇಶ ವಾಸಿಗಳಾದವರಲ್ಲಿ ಕೆಲವರು ಮತ್ತೆ ವಿದೇಶಕ್ಕೆ ಹೋಗುತ್ತಾರೆ. ಅದಕ್ಕೆ ಏನು ಕಾರಣ ಎಂಬ ಪ್ರಶ್ನೆಗೆ ಉತ್ತರ ಹುಡುಕಿದಾಗ ನನಗೆ ಸಿಕ್ಕಿದ ಉದಾಹರಣೆ ಇದು:

ಕೆಲವು ವರ್ಷಗಳ ಹಿಂದೆ ದಕ್ಷಿಣ ಕನ್ನಡದ ಬಂಟ್ವಾಳದಲ್ಲಿ ಹೀಗೆ ಐದಾರು ಎಕರೆ ಭೂಮಿಯನ್ನು ಖರೀದಿಸಿ ತೆಂಗು ಕಂಗು ಬಾಳೆ ನೆಟ್ಟು ಕೃಷಿಯಲ್ಲಿ ಸುಖವನ್ನೂ ನೆಮ್ಮದಿಯನ್ನೂ  ಅನುಭವಿಸುತ್ತಿದ್ದರು ಅವರು. ಕೆಲವೇ ವರ್ಷಗಳಲ್ಲಿ ತೋಟ ಕೋತಿಗಳ ಸ್ವಾಧೀನವಾಗಿ ಏನೂ ಬೆಳೆಯಲಾಗದೆ ಹತಾಶರಾಗಿ ಆತ್ಮಹತ್ಯೆ ಮಾಡಿಕೊಂಡರು. ಈ ಸಂಭವ ಸರಕಾರದ ಗಮನಕ್ಕೆ ಬರಲಿಲ್ಲವೆಂದೇ ತೋರುತ್ತದೆ. ಮನುಷ್ಯ ಬೇಕೋ, ಕೋತಿ ಬೇಕೋ ಎಂದು ತೀರ್ಮಾನಿಸಲು ಬಹುಶಃ ಸರಕಾರದಿಂದ ಆಗಲಿಲ್ಲ.

ಇತ್ತೀಚೆಗಿನ ದಿನಗಳಲ್ಲಿ, ಈ ರೀತಿ ಕೋತಿಗಳ ಮತ್ತು ಆನೆಗಳ ಹಾವಳಿಯಿಂದ ಕಂಗೆಟ್ಟು ಮರಳಿ ವಿದೇಶಕ್ಕೆ ಹೋದ ಕೆಲವರು ನನಗೆ ಗೊತ್ತು. ಇನ್ನು ಕೆಲವರು ತಮ್ಮ ಜಾಗವನ್ನು ಸಿಕ್ಕಿದ ಬೆಳೆಗೆ ಮಾರಿ ಬೆಂಗಳೂರು, ಮುಂಬಯಿ ಮುಂತಾದ ನಗರಗಳಿಗೆ ವಲಸೆ ಹೋಗಿದ್ದಾರೆ. ಹಾಗೆ ಹೋದವರಲ್ಲಿ ಕೆಲವೇ ಮಂದಿ ಸ್ವಂತ ವಾಸಕ್ಕೆ ಮನೆ ಕೊಳ್ಳಲು ಶಕ್ತರಾದರು. ಒಂದಷ್ಟು ಮಂದಿ ಬಹುಮಹಡಿಗಳಲ್ಲಿ ಫ್ಲ್ಯಾಟ್ ಎಂಬ ಗೂಡುಗಳಲ್ಲಿ ವಾಸಿಸುತ್ತಿದ್ದಾರೆ. ಇನ್ನು ಕೆಲವರು ತಮ್ಮ ಸೈಟನ್ನು ಮಾರಲಾಗದೆ, ಕೋತಿಗಳನ್ನೂ ಓಡಿಸಲಾಗದೆ ಕಣ್ಣೀರು ಸುರಿಸುತ್ತಾ ಇದ್ದಾರೆ.

ಎಲ್ಲಿಗೂ ಹೋಗಲಾಗದ ಬಡ ರೈತರು ಮತ್ತು ಇತರ ಕೃಷಿಕರು ಬೆಳೆಯಬೇಕಾದ್ದನ್ನು ಬೆಳೆಯಲೂ ಆಗದೆ, ಬೆಳೆದದ್ದನ್ನು ಆನೆ, ಕೋತಿ, ಕಾಡು, ಹಂದಿ ಮುಂತಾದವು ನಾಶ ಮಾಡುವುದನ್ನು ನೋಡುತ್ತಾ ಇರಲೂ ಆಗದೆ ಇರುತ್ತಾರೆ. ಅವರ ಬಡತನ ಹೆಚ್ಚಾಗುತ್ತಾ ಹೋಗುತ್ತದೆ.

ಕಾಡುಮೃಗಗಳಿಂದ ಮತ್ತು ಕೋತಿಗಳಿಂದ ರಕ್ಷಣೆಗಾಗಿ ಜಿಲ್ಲಾಧಿಕಾರಿಗಳ ಬಳಿ ಹೋಗಿ ಎಷ್ಟು ಗೋಗರೆದರೂ ಪ್ರಯೋಜನವಾಗುವುದಿಲ್ಲ. ಅರಣ್ಯಾಧಿಕಾರಿಗಳ ಬಳಿ ಹೋದರೆ ಕೋತಿ, ಆನೆಗಳನ್ನು ಹೇಗೆ ಓಡಿಸಬೇಕೆಂಬ ತಂತ್ರಗಳನ್ನು ಮತ್ತು ಮಂತ್ರಗಳನ್ನು ಹೇಳುತ್ತಾರೆ. ಅವು ಫಲಕಾರಿಯಾಗುವುದಿಲ್ಲ ಎಂದು ಕೃಷಿಕನಿಗೆ ಗೊತ್ತೇ ಇದೆ. ಆದರೆ ಪಾಪ ಅರಣ್ಯಾಧಿಕಾರಿಗಳು ಏನು ಮಾಡಿಯಾರು? ಅವರಿಗೂ ಒಂದಷ್ಟು ಕೆಲಸಗಳಿರುತ್ತವಲ್ಲ? ಸ್ವಂತದ್ದಾಗಲಿ, ಕದ್ದಾಗಲಿ, ಅರಣ್ಯಾಧಿಕಾರಿಗಳ ಪರವಾನಗಿಯಿಲ್ಲದೆ ಮರ ಕಡಿದು ಸಾಗಿಸುವವರನ್ನು ವಿಚಾರಿಸಿಕೊಳ್ಳಬೇಕು. ಅಷ್ಟು ಮುಖ್ಯವಾದ ತಮ್ಮ ಕಾಯಕವನ್ನು ಅವರು ಉಪೇಕ್ಷಿಸುವಂತಿಲ್ಲ!

ಜನರ ಪಾಲಿಗೆ ಬಹುತೇಕ ಅಮೂರ್ತವೇ ಆಗಿರುವ ಸರಕಾರದ ಮೂರ್ತ ಜನಪ್ರತಿನಿಧಿಗಳು, ಇದು ತಮಗೆ ಸಂಬಂಧಿಸಿದ ವಿಷಯವೇ ಅಲ್ಲ ಎಂದುಕೊಂಡಿದ್ದಾರೆ. ಮದುವೆ, ಮುಂಜಿಯಿಂದ ಆರಂಭಿಸಿ, ಬಹುತೇಕ ಪ್ರತಿದಿನ ನಾನಾ  ವಿಧ ಸಭೆ, ಸಮಾರಂಭಗಳಲ್ಲಿ ಭಾಷಣ ಮಾಡುವುದೇ ತಾವು ಮಾಡಬೇಕಾದ ಮುಖ್ಯ ಕೆಲಸ ಎಂದು ತಿಳಿದುಕೊಂಡಿರುತ್ತಾರೆ. ರೈತರ ಮತ್ತು ಇತರ ಕೃಷಿಕರ ಕಷ್ಟ ಅವರ ಕಣ್ಣಿಗೆ ಕಾಣಿಸುವುದೇ ಇಲ್ಲ. ಪರಿಸರಕ್ಕೂ ಶ್ರೀಮಂತಿಕೆ ಎಂಬುದಿದೆ. ಅದು ಬಡವಾದರೆ ಪರಿಸರ ಎಂಬುದರ ಸೌಂದರ್ಯ ಕೂಡ ನಾಶವಾಗುತ್ತದೆ ಎಂದು ಯಾವ ಆಡಳಿತಾಧಿಕಾರಿಗಾದರೂ ಗೊತ್ತಿದೆಯೆ?

